# ಕೆಂಡದಲ್ಲಿ ಬೆಂದ ನೆಂಡಕುಮನ



■ ಪ್ರವೀಣ ಕುಲಕರ್ಣಿ

ಪೂರ್ವ ಆಫ್ರಿಕಾದ ಪುಟ್ಟ ದೇಶ ಬುರುಂಡಿ. ಇಲ್ಲಿನ ಲ್ಯಾಟಿಟಿಯಾ ನೆಂಡಕುಮನ ಅವರು 60ರ ಹರೆಯದ ಮಹಿಳೆ. ಐವತ್ತು ವರ್ಷಗಳ ಹಿಂದಿನ ಆ ಘಟನೆ ನೆನೆದರೆ ಈಗಲೂ ಅವರು ಹತ್ತು ವರ್ಷದ ಬಾಲಕಿಯಂತೆ ಕಣ್ಣೀರು ಹಾಕುತ್ತಾರೆ. 1972ರಲ್ಲಿ ನಡೆದ ಜನಾಂಗೀಯ ಹತ್ಯಾಕಾಂಡದ ಕಹಿನೆನಪುಗಳು ಅವರ ಮನದೊಳಗೆ ಇನ್ನೂ ಅಚ್ಚೊತ್ತಿ ನಿಂತಿವೆ. ಆಗ ನಡೆದ ಗಲಭೆಯಲ್ಲಿ ಅವರ ತಂದೆ ಕಣ್ಮರೆಯಾದ ಘಟನೆ ನೆನಪಿಸಿಕೊಂಡರೆ ಅವರ ಕಣ್ಣೀರಿಗೆ ತಡೆಯೊಡ್ಡುವುದು ಕಷ್ಟ.

ಬುರುಂಡಿ ದೇಶದ ಅತಿದೊಡ್ಡ ನಗರ ಎನಿಸಿದ ಬುಜುಂಬುರಾದಲ್ಲಿ ಲ್ಯಾಟಿಟಿಯಾ ಅವರ ತಂದೆ ಬ್ಯಾಂಕರ್ ಆಗಿದ್ದರು. ಗಲಭೆಯ ಸಂದರ್ಭದಲ್ಲಿ ಅವರನ್ನು ಸರ್ಕಾರದಿಂದಲೇ ಬಂಧಿಸಿ ಕರೆದೊಯ್ಯಲಾಗಿತ್ತು. 'ತಂದೆಯನ್ನು ಎಲ್ಲಿಗೆ ಕರೆದೊಯ್ದರು ಎನ್ನುವುದು ಐವತ್ತು ವರ್ಷಗಳು ಗತಿಸಿದ ಮೇಲೂ ಗೊತ್ತಾಗಿಲ್ಲ. ನನಗೀಗ ಗೊತ್ತಿರುವ ಸಂಗತಿ ಏನೆಂದರೆ, ಆ ಗಲಭೆಯ ಸಂದರ್ಭದಲ್ಲಿ ನಾವು ಎಲ್ಲವನ್ನೂ ಕಳೆದುಕೊಂಡೆವು ಎನ್ನುವುದು ಮಾತ್ರ' ಎಂದು ಕಣ್ಣೀರು ಒರೆಸಿಕೊಳ್ಳುತ್ತಾರೆ ಲ್ಯಾಟಿಟಿಯಾ.

ಬದುಕಿ ಉಳಿದಿದ್ದು, ಬೆಳೆದು ದೊಡ್ಡವರಾದ ಮೇಲೆ ಶಿಕ್ಷಕರೊಬ್ಬರನ್ನು ವರಿಸಿದ್ದು, 14 ಮಕ್ಕಳನ್ನು ಹೆತ್ತಿದ್ದು, ಹೊಸ ಬದುಕನ್ನು ಕಟ್ಟಿಕೊಂಡಿದ್ದು – ಇಂತಹ ಹಲವು ವಿದ್ಯಮಾನಗಳು ಜೀವನದಲ್ಲಿ ಘಟಿಸಿದರೂ ಹತ್ತು ವರ್ಷದ ಬಾಲಕಿಯಾಗಿದ್ದಾಗ ಬೀದಿಯಲ್ಲಿ ಕಂಡ ರಕ್ತದೋಕುಳಿಯ ನೆನಪುಗಳನ್ನು ಅಳಿಸಿಹಾಕಲು ಅವರಿಗೆ ಇನ್ನೂ ಸಾಧ್ಯವಾಗಿಲ್ಲ.

ದೀರ್ಘಕಾಲದವರೆಗೆ ಈ ಹತ್ಯಾಕಾಂಡದ ಕುರಿತು ಸಾರ್ವಜನಿಕವಾಗಿ ಚರ್ಚೆ ಮಾಡುವುದನ್ನು ಅಲ್ಲಿನ ಸರ್ಕಾರವೇ ನಿಷೇಧಿಸಿತ್ತು. ಗಲಭೆ ನಡೆದ 1972ರ ಏಪ್ರಿಲ್ ಮತ್ತು ಜೂನ್ ನಡುವಿನ ಅವಧಿಯನ್ನು 'ಇಕಿಜಾ' (ಉಪದ್ರವದ ಕಾಲ) ಎಂದೇ ಅಲ್ಲಿನ ಜನ ಕರೆಯುತ್ತಿದ್ದರು. ಆದರೆ, ಐದು ದಶಕಗಳ ಹಿಂದೆ ನಡೆದ ಘಟನೆಗಳ ಸತ್ಯಾಸತ್ಯತೆಯ ಪರಿಶೀಲನೆಗೆ ಕೊನೆಗೂ ಅಲ್ಲಿನ ಸರ್ಕಾರ 2019ರಲ್ಲಿ ಒಪ್ಪಿಕೊಂಡಿತು. ಸಾಮೂಹಿಕವಾಗಿ ಸಮಾಧಿ ಮಾಡಿದ ಸ್ಥಳಗಳನ್ನು ಮರು ಅಗೆದು ತಲೆ ಎಣಿಸಲು ಮತ್ತು ಸತ್ತ ವ್ಯಕ್ತಿಗಳನ್ನು ಗುರುತಿಸಲು ಸಾಧ್ಯವಿದೆಯೇ ಎಂದು ಪರಿಶೀಲಿಸಲೂ ಮುಂದಾಯಿತು. ಸರ್ಕಾರದ ಈ ನಿರ್ಧಾರ ಹೊರಬೀಳುತ್ತಿದ್ದಂತೆಯೇ ಲ್ಯಾಟಿಟಿಯಾ ಮೊದಲನೆಯವರಾಗಿ ಅಧಿಕಾರಿಗಳನ್ನು ಸಂಪರ್ಕಿಸಿದ್ದರು.

ಉಳಿದಿರುವ ಅವಶೇಷಗಳ ಆಧಾರದಿಂದ ಐದು ದಶಕಗಳ ಬಳಿಕ ವ್ಯಕ್ತಿಯ ಗುರುತು ಪತ್ತೆ ಮಾಡುವುದು ಹೆಚ್ಚೂ ಕಡಿಮೆ ಅಸಾಧ್ಯವಾದ ಕೆಲಸವಾಗಿತ್ತು. ಆದರೆ, ಲ್ಯಾಟಿಟಿಯಾ ಅವರಿಗಿದ್ದ ಏಕೈಕ ಭರವಸೆಯೆಂದರೆ ತಂದೆಯ ದಂತಗಳಾಗಿದ್ದವು. 'ನನ್ನ ತಂದೆ ಅಪಘಾತದಲ್ಲಿ ಹಲ್ಲುಗಳನ್ನು ಕಳೆದುಕೊಂಡಿದ್ದರು. ಹೀಗಾಗಿ ಬಂಗಾರದ ಅಚ್ಚಿನ ಹಲ್ಲುಗಳನ್ನು ಅವರು ಬಳಸುತ್ತಿದ್ದರು' ಎಂದು ಅವರು ಹೇಳುತ್ತಾರೆ. ತನಿಖಾಧಿಕಾರಿಗಳ ಮುಂದೆಯೂ ಲ್ಯಾಟಿಟಿಯಾ ಅವರು ಈ ಮಾಹಿತಿಯನ್ನು ಇಟ್ಟರು. ಗಿಟೆಗಾ ಪಟ್ಟಣದ ಗುಡ್ಡದ ಇಳಿಜಾರಿನಲ್ಲಿ ನಡೆಸಿದ ಅಗೆತದಲ್ಲಿ ಪತ್ತೆಯಾಗಿದ್ದ ಮಾನವನ ತಲೆಬುರುಡೆಯಲ್ಲಿ ಲೋಹದ ಹಲ್ಲುಗಳು ಇರುವುದು ಕಂಡುಬಂದಿತ್ತು. ಅಲ್ಲಿರುವುದು ತಂದೆಯದೇ ಅವಶೇಷ ಎಂದು ಅವರೀಗ ನಂಬಿದ್ದಾರೆ.

ಬುರುಂಡಿ 1962ರಲ್ಲಿ ಸ್ವಾತಂತ್ರ್ಯ ಪಡೆಯಿತು. ನಂತರದ ದಿನಗಳಲ್ಲಿ ಅಲ್ಲಿನ ಮೂಲ ನಿವಾಸಿಗಳಾದ ಹುಟು ಮತ್ತು ತುತ್ಸಿ ಜನಾಂಗಗಳ ಮಧ್ಯೆ ಗಲಭೆ ಶುರುವಾಯಿತು. ಬೀದಿ ಬೀದಿಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಹೆಣಗಳು ಬಿದ್ದವು. ಹುಟು ತೀವ್ರವಾದಿಗಳು ತುತ್ಸಿಗಳು ವಾಸವಾಗಿದ್ದ ಪ್ರದೇಶಗಳ ಮೇಲೆ ದಾಳಿ ನಡೆಸಿದಾಗ ಭೀಕರ ಹತ್ಯಾಕಾಂಡಕ್ಕೆ ಬುರುಂಡಿ ಸಾಕ್ಷಿಯಾಗಬೇಕಾಯಿತು. ಇದಕ್ಕೆ ಪ್ರತೀಕಾರವಾಗಿ ತುತ್ಸಿಗಳು, ಹುಟು ಸಮುದಾಯಕ್ಕೆ ಸೇರಿದ ವಿದ್ಯಾರ್ಥಿಗಳು, ಶಿಕ್ಷಕರು, ಸರ್ಕಾರಿ ನೌಕರರು ಸೇರಿದಂತೆ ವಿದ್ಯಾವಂತರನ್ನೇ ಹುಡುಕಿ, ಹುಡುಕಿ ಕೊಂದರು. ಈ ಹತ್ಯಾಕಾಂಡದಲ್ಲಿ ಮೂರು ಲಕ್ಷ ಜನ ಜೀವ ಕಳೆದುಕೊಂಡರು ಎಂಬುದೊಂದು ಅಂದಾಜು.

ದೇಶದಾದ್ಯಂತ ಹಿಂಸಾಚಾರ ನಡೆದರೂ ಹತ್ಯೆಗಳ ಭೀಕರತೆ ಕಂಡುಬಂದಿದ್ದು ಮಾತ್ರ ಗಿಟೆಗಾ ಪಟ್ಟಣದಲ್ಲಿ. ಸರ್ಕಾರದ ಮಿಲಿಟರಿ ಪಡೆಗಳು ತಾವು ಸೆರೆ ಹಿಡಿದವರನ್ನು ಕೊಂದು ಕಂದಕಗಳಲ್ಲಿ ಶವ ಎಸೆಯುತ್ತಿದ್ದವು. ಘಟನೆಯ ಕುರಿತು 13 ವರ್ಷಗಳ ಕಾಲ ತನಿಖೆ ನಡೆಸಿದ ಅಲ್ಲಿನ ಸರ್ಕಾರ, ಕೊನೆಗೂ ಅಂದಿನ ಘಟನೆಯನ್ನು ಒಂದು ಹತ್ಯಾಕಾಂಡ ಎಂದು ಒಪ್ಪಿಕೊಂಡಿದೆ.

'ಜನಾಂಗೀಯ ಗಲಭೆಯಲ್ಲಿ ಸೇನೆಯೂ ಸೇರಿಕೊಂಡು ಬಹುದೊಡ್ಡ ಹತ್ಯಾಕಾಂಡಕ್ಕೆ ನಮ್ಮ ದೇಶ ಸಾಕ್ಷಿಯಾಗಬೇಕಾಯಿತು. ತುತ್ಸಿ ಸಮುದಾಯಕ್ಕೆ ಸೇರಿದ ಆಗಿನ ಅಧ್ಯಕ್ಷ ಮೈಕೆಲ್ ಮಿಕಂಬೆರೊ ಅವರಿಂದ ಗಲಭೆಗೆ ದೊಡ್ಡ ಕುಮ್ಮಕ್ಕು ಸಿಕ್ಕಿತ್ತು' ಎನ್ನುತ್ತಾರೆ ಲ್ಯಾಟಿಟಿಯಾ. 'ಇತಿಹಾಸದ ಉದ್ದಕ್ಕೂ ಈ ಜನಾಂಗೀಯ ದ್ವೇಷ ನಮ್ಮ ದೇಶವನ್ನು ಸುಡುತ್ತಲೇ ಬಂದಿದೆ. ಒಂದು ಸಮುದಾಯಕ್ಕೆ ಸೇರಿದ ನಾಯಕರು ದೇಶದ ಚುಕ್ಕಾಣಿ ಹಿಡಿದಾಗ ಇನ್ನೊಂದು ಸಮುದಾಯದ ಜನ ಅದರ ಬಿಸಿಯನ್ನು ಅನುಭವಿಸುತ್ತಲೇ ಬಂದಿದ್ದಾರೆ. ಘಟನೆ ನಡೆದು ಐವತ್ತು ವರ್ಷಗಳು ಕಳೆದರೂ ನಾವೇನೂ ಬದಲಾಗಿಲ್ಲ' ಎಂದು ಆಕೆ ನಿಟ್ಟುಸಿರು ಬಿಡುತ್ತಾರೆ.

ಗಿಟೆಗಾ ಪಟ್ಟಣದಲ್ಲಿ ನಡೆಸಿದ ಅಗೆತದಲ್ಲಿ ತಲೆಬುರುಡೆಗಳು, ಮೂಳೆಗಳು, ಚೀಲಗಳು, ಬಟ್ಟೆಯ ತುಂಡುಗಳು ಸಿಕ್ಕಿವೆ. ಅವುಗಳನ್ನು ಸರ್ಕಾರಿ ಕಟ್ಟಡದ ಕತ್ತಲ ಕೋಣೆಯೊಂದರಲ್ಲಿ ಸುರಕ್ಷಿತವಾಗಿ ಇಡಲಾಗಿದೆ. ಹತ್ಯಾಕಾಂಡದ ಕಹಿನೆನಪಿನ ಸ್ಮಾರಕವನ್ನು ಸ್ಥಾಪಿಸಲು ಅಲ್ಲಿನ ಸರ್ಕಾರ ನಿರ್ಧರಿಸಿದ್ದು, ಈ ಅವಶೇಷಗಳು ಅಲ್ಲಿಯೇ ನೆಲೆ ಕಂಡುಕೊಳ್ಳಲಿವೆ. 'ದುರ್ಘಟನೆಯೇನೋ ನಡೆದುಹೋಗಿದೆ. ನನ್ನಂತೆ ಲಕ್ಷಾಂತರ ಜನ ತಮ್ಮ ಬಂಧುಗಳನ್ನು ಕಳೆದುಕೊಂಡು ಇಷ್ಟೊಂದು ದೀರ್ಘ ಕಾಲದ ನೋವು ಅನುಭವಿಸಿದ್ದಾಗಿದೆ. ಇನ್ನಾದರೂ ಸರ್ಕಾರ ನೋವು ಮರೆಸುವಂತೆ ನಡೆದುಕೊಳ್ಳಬೇಕು. ಭವ್ಯ ಭವಿಷ್ಯಕ್ಕೆ ನಾಂದಿ ಹಾಡಬೇಕು' ಎಂದು ಲ್ಯಾಟಿಟಿಯಾ ಆಶಿಸುತ್ತಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65